ಮುಂದಿನ ಮೂರೇ ದಿನಗಳಲ್ಲಿ ಕೊಪ್ಪೀಕರ ರಸ್ತೆಯ ಆ ಹಳ್ಳ ಸಂಬಂಧಪಟ್ಟವರಿಂದ ಮುಚ್ಚಲ್ಪಟ್ಟು ರಿಪೇರಿಯಾದ ಸುದ್ದಿಯನ್ನು ಶಂಕರ ಅವಳಿಗೆ ಹೇಳಿದ್ದ. ಸರಸ್ವತಿಗೆ ಇವೆಲ್ಲ ಹೊಸ ಹೊಸ ಕಿಟಕಿ ಬಾಗಿಲುಗಳು.

ವಿಧಾನಸಭೆ ಹಾಗೂ ಸಂಸತ್ತಿನ ಚುನಾವಣೆ ನಡೆಯುತ್ತಿದ್ದ ಸಂದರ್ಭದಲ್ಲಂತೂ ಒಂದು ಪ್ರತಿಷ್ಠಿತ ಪತ್ರಿಕೆಯ ಒಬ್ಬ ವರದಿಗಾರನಿಗೆ ಒಂದು ಪಕ್ಷದ ಮುಖಂಡ ರೇಮಂಡ್ ಪ್ಯಾಂಟು–ಶರ್ಟ್‌ಗಳನ್ನು ಮತ್ತು ಎಚ್‌ಎಂಟಿ ವಾಚುಗಳನ್ನು ಕಾಣಿಕೆಯಾಗಿ ಕೊಟ್ಟು ಕಳಿಸಿದ್ದ. ಆ ವರದಿಗಾರ ಅದರ ಫೋಟೊ ಹೊಡೆದು ತಮ್ಮ ಪತ್ರಿಕೆಯಲ್ಲೇ ಪ್ರಕಟಿಸಿ, ಅದನ್ನು ಲಂಚವೆಂದು ಕರೆದು ಹಿಂದಿರುಗಿಸಿದ್ದ. ಮಾರನೇ ದಿನ ಸತ್ಯಹರಿಶ್ಚಂದ್ರ ಪತ್ರಿಕೆಯಲ್ಲಿ ಬಂದ ವಿವರಗಳ ಫೋಟೊ ತೆಗೆದು ಫೇಸ್‌ಬುಕ್‌ನಲ್ಲಿ ಅಪ್‌ಲೋಡ್ ಮಾಡಿದ್ದ. ಹುಬ್ಬಳ್ಳಿ ಮಂದಿಯಲ್ಲಿ ಅದೊಂದು ದೊಡ್ಡ ಸಂಚಲನಕ್ಕೇ ಕಾರಣವಾಗಿತ್ತು. ನಂತರದ ದಿನಗಳಲ್ಲಿ ಹುಬ್ಬಳ್ಳಿಯ ರಾಜಕೀಯ ಮುಖಂಡರು ಭ್ರಷ್ಟಾಚಾರಕ್ಕೆ ಮುಂದಾಗಲು ಭಯಪಟ್ಟುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಈ ಸಂಗತಿ ಸರಸ್ವತಿಗೆ 'ಇದು ತಪ್ಪು, ಇದನ್ನು ನಾವು ಹೀಗೂ ವಿರೋಧಿಸಬಹುದು' ಎಂಬ ಅಂಶ ಮನವರಿಕೆಯಾಗಲು ಕಾರಣವಾಗಿತ್ತು. ಈ ತರಹದ್ದೇ ಅನೇಕ ಬಗೆಯ ಅಪ್‌ಡೇಟ್‌ಗಳು ಈಗ ಅವಳ ಟೈಮ್‌ಲೈನ್ ಮೇಲೆ ನುಸುಳಿ ನುಸುಳಿ ಬರತೊಡಗಿದವು. ಎಲ್ಲವನ್ನೂ ಸರಸ್ವತಿ ತನ್ಮಯತೆಯಿಂದ ಗ್ರಹಿಸತೊಡಗಿದಳು.

ಒಂದು ಸುಂದರ ಬೆಳಗಿನಲ್ಲಿ ಸರಸ್ವತಿ ಫೇಸ್‌ಬುಕ್ ಲಾಗಿನ್ ಆದಾಗ 'ಹ್ಯಾಪಿ ಟು ಬ್ಲೀಡ್' ಎಂಬ ಧ್ಯೇಯವಾಕ್ಯ ನುಸುಳುತ್ತಿತ್ತು. ಮುಟ್ಟಾದ ಹೆಂಗಸೊಬ್ಬಳು ತಮಿಳುನಾಡಿನಲ್ಲಿ ದೇವಸ್ಥಾನ ಪ್ರವೇಶಿಸಿದಳೆಂದು ಅವಳನ್ನು ಹೊಡೆದು ಸಾಯಿಸಿದ ವಿವರಗಳ ಜೊತೆ ಅದನ್ನು ಅಪ್‌ಡೇಟ್ ಮಾಡಿದ ಕಾಲೇಜು ವಿದ್ಯಾರ್ಥಿನಿ, 'ಹೌದು, ನಾವು ಮುಟ್ಟಾಗುತ್ತೇವೆ ಏನೀಗ?' ಎಂದು ಪ್ರಶ್ನಿಸಿದ್ದಳು. ಬದುಕಿನಲ್ಲಿ ಇದಕ್ಕಿಂತ ದೊಡ್ಡ ಶಾಕ್ ಸರಸ್ವತಿಗೆ ಬೇರೊಂದಿರಲಿಲ್ಲ. ಒಮ್ಮೆಲೇ ಸರಸ್ವತಿಗೆ ಮುಜುಗರವೆನ್ನಿಸಿದರೂ ಕ್ರಮೇಣ ಹೌದಲ್ಲ, ನೈಸರ್ಗಿಕ ಕ್ರಿಯೆಯಾದ ನಮ್ಮ ಮುಟ್ಟಿನ ವಿಷಯವನ್ನು ಹೇಳಲು ನಾವೇಕೆ ಅಂಜಬೇಕು ಎಂಬ ಮನಸ್ಥಿತಿ ರೂಪುಗೊಂಡಿತ್ತು. ಮತ್ತೆ ಮತ್ತೆ ಆ ಪೋಸ್ಟನ್ನು ತೆಗೆದು ಓದಿದಳು. ಅದಕ್ಕೆ ಯಾರು ಏನು ಕಮೆಂಟು ಬರೆದಿದ್ದಾರೆಂದು ಪದೇ ಪದೇ ನೋಡಿದಳು. ಏನೋ ಒಂಥರಾ ಧೈರ್ಯ ಉಕ್ಕಿತು. ಅದಕ್ಕೆ ತಾನೂ ಲೈಕ್ ಮಾಡಿದಳು, ಈಗ ಆ ಪೋಸ್ಟಿನ ಲೈಕ್‌ಗಳ ಸಂಖ್ಯೆ ಮೂರು ಸಾವಿರವನ್ನೂ ದಾಟಿತ್ತು. ಅದಕ್ಕೆ ತನ್ನ ಪ್ರತಿಕ್ರಿಯೆ ಬರೆಯುತ್ತ ಸತ್ಯ ಹರಿಶ್ಚಂದ್ರ 'ಸನಾತನಿಗಳು ಅನಗತ್ಯ ಬೊಬ್ಬಿಡುವ ಈ ನೆಲದಲ್ಲಿ ಇದು ಸ್ತ್ರೀ ಅಸ್ತಿತ್ವದ ಕುರಿತಾದ ಒಂದು ಸಣ್ಣ ಕ್ರಾಂತಿ' ಅಂತ ಬರೆದಿದ್ದ. ಅವನ ಪ್ರತಿಕ್ರಿಯೆಯೊಂದಕ್ಕೇ ಮುನ್ನೂರು ಹೆಣ್ಣುಮಕ್ಕಳು ಲೈಕ್ ಮಾಡಿದ್ದರು. ಹೀಗೆ ಸರಸ್ವತಿಗೆ ಈ ಫೇಸ್‌ಬುಕ್ ಎಂಬ ತಾಣವು ನೂರಾರು ಬಣ್ಣಗಳ ಕಣ್ಣು ನೀಡುವ ಶುದ್ಧ ಕನ್ನಡಕವೆನಿಸಿತ್ತು.

ಮೊದಮೊದಲು 'ಗುಡ್ ನೈಟ್ ಸ್ವೀಟ್ ಡ್ರೀಮ್ಸ್' ಎಂದು ಬರೆದುಕೊಂಡ, ಆಗಷ್ಟೇ ಅರಳಿದ ಸುಂದರ ಹೂವಿನ ಚಿತ್ರಗಳು ಅರವತ್ತೋ ಎಪ್ಪತ್ತೋ ಜನರಿಗೆ ಟ್ಯಾಗ್ ಆಗಿ ಬರುವ ಸ್ನೇಹಿತರ ಪೋಸ್ಟುಗಳನ್ನು ತನ್ನ ಚೌಕಟ್ಟಿಗೆ ಸುಮ್ಮನೇ ಬಿಟ್ಟುಕೊಳ್ಳುತ್ತಿದ್ದವಳು, ಈಗ ಯಾವುದೇ ಮುಲಾಜಿಲ್ಲದೇ ಅಂಥವುಗಳನ್ನು ಹೈಡ್ ಮಾಡಿಬಿಡುವಳು. ತನ್ನದೇ ಮನಸ್ಸಿನ ದುಗುಡ ದುಮ್ಮಾನಗಳನ್ನು ಈ ಫೇಸ್‌ಬುಕ್ ಎಂಬ ಲೋಕ ತನಗರಿವಿಲ್ಲದೇ ಹೊರಹಾಕುತ್ತಿದೆ ಅನ್ನಿಸುತ್ತ ಹೋದ ಹಾಗೆ ಸರಸ್ವತಿಗೆ ಅದು ಇನ್ನಷ್ಟು ಆಪ್ತವೆನಿಸಿತ್ತು.